ಮಂತ್ರಿಯಾಗಿ ಹೇಳದೇ ಹೋದರೆ ನಮಗೆ ಸಮಾಧಾನ ತರುವುದಿಲ್ಲ ಪೌರ ಕಾರ್ಮಿಕರ ಬಗ್ಗೆ ಸರ್ಕಾರ ಇಲ್ಲ ಅವರ ಬಗ್ಗೆ ನಿಮಗೆ ಕಳಕಳಿ ಇಲ್ಲ ಆದುದರಿಂದ ನಾವು ಸಭಾತ್ಯಾಗ ಮಾಡುತ್ತೇವೆ

ಶ್ರೀ ಎನ್ ಯೋಗೀಶ್ ಭಟ್ – ನಿಮ್ಮ ಅವಧಿಯಲ್ಲಿ ಏನೂ ಮಾಡಿಲ್ಲ ಇನ್ನೂ ಮೊಸಳೆ ಕಣ್ಣೀರು ಹಾಕಿದಂತೆ ಆಗುತ್ತದೆ

(ಗೊಂದಲ)

(ಈ ಹಂತದಲ್ಲಿ ಮಾನ್ಯ ಕಾಂಗ್ರೆಸ್ ಪಕ್ಷದ ಸದಸ್ಯರು ಹಾಗೂ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ವಿಷಯ ಮಳೆಯಿಂದ ಕೊಡಗು ಜಿಲ್ಲೆಯಲ್ಲಾಗಿರುವ ತೊಂದರೆಗಳ ಬಗ್ಗೆ

ಶ್ರೀ ಹೆಚ್ ಡಿ ಬಸವರಾಜು (ವಿರಾಜಪೇಟೆ) – ಮಾನ್ಯ ಉಪಾಧ್ಯಕ್ಷರೆ, ಕೊಡಗು ಜಿಲ್ಲೆಯಲ್ಲಿ ಕಳೆದ ಒಂದೂವರೆ ತಿಂಗಳಿನಿಂದ ಅಪಾರವಾಗಿ ಧಾರಕಾರವಾಗಿ ಸತತವಾಗಿ ಮಳೆ ಸುರಿಯುತ್ತಿದೆ ಈ ಒಂದು ವಿಚಾರದಲ್ಲಿ ನಾನು ಸರ್ಕಾರದ ಗಮನವನ್ನು ಸೆಳೆಯಬೇಕೆಂದು ಕಳೆದ ನಾಲ್ಕು ದಿವಸದಿಂದ ಇಲ್ಲಿ ಕುಳಿತಿದ್ದೇನೆ ಈಗ ನನ್ನ ನೋವು ಏನೆಂದರೆ ಹಲವಾರು ಗ್ರಾಮಗಳು ಸತತವಾದ ಮಳೆಯಿಂದಾಗಿ ಹೆಚ್ಚಿದ ಪ್ರವಾಹದಿಂದಾಗಿ ಜಲಾವೃತವಾಗಿದೆ ಆ ಭಾಗದಲ್ಲಿ ಸಂಪರ್ಕ ಸಂಪೂರ್ಣ ಕಡಿತವಾಗಿದೆ ಇವತ್ತು ಆ ಭಾಗದಲ್ಲಿ ವಾಸ ಮಾಡುವಂತಹ ಗ್ರಾಮಸ್ಥರಿಗೆ ವಿದ್ಯುತ್ ಸಂಪರ್ಕ ಸಂಪೂರ್ಣವಾಗಿ ಕಡಿತವಾಗಿರುವುದರಿಂದ ಸುಮಾರು 20 ದಿವಸದಿಂದ ಆ ಭಾಗದಲ್ಲಿ ಕತ್ತಲಿನ ಕೂಪದಲ್ಲಿ ರಾತ್ರಿ ಹೊತ್ತು ಕಳೆಯುವಂತಹ ದುರ್ಭರ ಪರಿಸ್ಥಿತಿ ಒದಗಿ ಬಂದಿದೆ ಇವತ್ತು ನಾವು ಸರ್ಕಾರವನ್ನು ಹಲವಾರು ಬಾರಿ ಒತ್ತಾಯವನ್ನು ಮಾಡಿದ್ದೇವೆ ಆ ಭಾಗದಲ್ಲಿ ಇರುವಂತಹ ಜನರಿಗ ಹೆಚ್ಚಿನ ಪ್ರಮಾಣದಲ್ಲಿ ಸೀಮೆ ಎಣ್ಣೆಯನ್ನು ಒದಗಿಸುವಂತಹ ಕೆಲಸವನ್ನು ಮಾಡಬೇಕು ಇವತ್ತು ಅಲ್ಲಿ ಕೂಲಿ ಕಾರ್ಮಿಕರು ಮಳೆಯಿಂದಾಗಿ ಹೊರಗೆ ಬರುವುದಕ್ಕಾಗುತ್ತಿಲ್ಲ ಅವರು ಜೀವನ ನಡೆಸುವುದು ದುರ್ಭರವಾಗಿದೆ ಅಲ್ಲಿ ಅವರು ಕೂಲಿ ಕೆಲಸ ಮಾಡದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಆದುದರಿಂದ ಅವರಿಗೆ ಅಕ್ಕಿಯನ್ನು ಉಚಿತವಾಗಿ ಹಂಚಬೇಕೆಂದು ನನ್ನ ಮನವಿ ಆದರೆ ಇದು ಒಂದು ರೀತಿ ಅರಣ್ಯರೋದನವಾಗಿದೆ ಅರಣ್ಯ ಪ್ರದೇಶದಲ್ಲಿ ವಾಸ ಮಾಡುತ್ತಿರುವಂತಹ ಗಿರಿಜನರ ಪರಿಸ್ಥಿತಿ ಬಹಳ ದುಸ್ತರವಾಗಿದೆ ಯಾವ ರೀತಿ ಅವರ ಬಗ್ಗೆ ಕಾಳಜಿಯನ್ನು ಸರ್ಕಾರ ತೆಗೆದುಕೊಂಡು ಅವರ ರಕ್ಷಣೆಗೆ ನಿಲ್ಲಬೇಕಾಗತ್ತೋ ಆ ಮಟ್ಟದ ಪ್ರಮಾಣದಲ್ಲಿ ಇಲ್ಲ ಎನ್ನುವುದು ನೋವಿನ ಸಂಗತಿಯಾಗಿದೆ ಮಾನ್ಯ ಉಪಾಧ್ಯಕ್ಷರೆ, ನಾನು ತಮ್ಮ ಮೂಲಕ ಕೇಳುತ್ತಿದ್ದೇನೆ, ಇವತ್ತು ಜಲಾವೃತವಾಗಿರುವಂತಹ ಮತ್ತು

ಸಂಪರ್ಕವನ್ನು ಕಡಿದು ಹೋಗಿರುವ ಕೊಡಗು ಜಿಲ್ಲೆಗೆ ಅತೀ ಹೆಚ್ಚಿನ ಪ್ರಮಾಣದಲ್ಲಿ ಸೀಮೆ ಎಣ್ಣೆಯನ್ನು ಸರಬರಾಜು ಮಾಡುವುದಕ್ಕೆ ಆದೇಶವನ್ನು ಕೊಡಬೇಕು ಅವರು ಅರಣ್ಯ ಪ್ರದೇಶದಲ್ಲಿ ವಾಸ ಮಾಡುತ್ತಿರುವಂತಹ, ಆರ್ಥಿಕವಾಗಿ ದುರ್ಬಲವಾಗಿರುವಂತಹ ಗಿರಿಜನರು ಮತ್ತು ಬಡ ಜನರಿಗೆ ಉಚಿತವಾಗಿ ಅಕ್ಕಿಯನ್ನು ಹಂಚುವಂತಹ ಕೆಲಸವನ್ನು ಮಾಡಬೇಕು ಅವರ ರಕ್ಷಣೆಗ ಯಾವುದೇ ವಸ್ತ್ರಗಳು ಸಿಗದೇ ಇರುವುದರಿಂದ, ಅವರಿಗೆ ಉಚಿತವಾಗಿ ಪರಿಹಾರದ ರೂಪದಲ್ಲಿ ಕಂಬಳಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ ಅಲ್ಲಿರುವಂತಹ ಗುಡಿಸಲುಗಳು ಮಳೆಯಿಂದಾಗಿ ಸಂಪೂರ್ಣವಾಗಿ ಕುಸಿದು ಹೋಗಿವೆ ತಾವು ಸರ್ಕಾರದಿಂದ ಕೊಡುವಂತಹ ಪರಿಹಾರದ ಹಣ ತುಂಬಾ ಕಡಿಮೆ ಇದೆ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಒದಗಿಸುವಂತಹ ಕೆಲಸವಾಗಬೇಕು ಇವತ್ತು ಎಲ್ಲಾ ಗದ್ದೆಗಳಲ್ಲಿ ಅಧಿಕವಾಗಿ ಪ್ರವಾಹ ಬಂದಿರುವುದರಿಂದ, ಗದ್ದೆಯಲ್ಲಿ ಹೂಳು ತುಂಬಿಕೊಂಡು ಕೃಷಿ ಮಾಡುವುದಕ್ಕೆ ಆಗುತ್ತಿಲ್ಲ ಅವರಿಗೆ ಪರಿಹಾರವನ್ನು 500, 600, 700, 800, ರೂಪಾಯಿ ಮಾತ್ರ ಇದೆ ಆ ಗದ್ದೆಗಳಲ್ಲಿ ತುಂಬಿರುವಂತಹ ಹೂಳನ್ನು ತೆಗೆಯಬೇಕೆಂದರೆ ಒಂದೂವರೆ ತಿಂಗಳು ಕೆಲಸವನ್ನು ಆ ರೈತರು ಮಾಡಬೇಕಾಗುತ್ತದೆ ತದನಂತರದಲ್ಲಿ ಅವರು ವ್ಯವಸಾಯವನ್ನು ಮಾಡಬೇಕಾಗುತ್ತದೆ ಇವತ್ತು ಅವರಿಗೆ ಆಗಿರುವಂತಹ ಅಪಾರವಾದಂತಹ ಹಾನಿಯ ಬಗ್ಗೆ ಸರ್ಕಾರ ಸರಿಯಾದ ಅಂದಾಜು ಮಾಡಬೇಕಾಗಿದೆ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಸಂಬಂಧಪಟ್ಟ ರಸ್ತೆಗಳಾಗಲಿ, ಜಿಲ್ಲಾ ಪಂಚಾಯತ್ ರಸ್ತೆಗಳಾಗಲಿ, ಗ್ರಾಮ ಪಂಚಾಯತ್‌ನ ವ್ಯಾಪ್ತಿಗೆ ಬರುವಂತಹ ರಸ್ತೆಗಳ ಪರಿಸ್ಥಿತಿಯಾಗಲಿ ತುಂಬಾ ದುಸ್ತರವಾಗಿದೆ ಆ ಭಾಗದಲ್ಲಿ ಪ್ರಯಾಣ ಮಾಡುವುದಕ್ಕೆ ಆಗದಿರುವಂತಹ ರೀತಿಯಲ್ಲಿ ಹೊಂಡಗಳು ನಿರ್ಮಾಣವಾಗಿವೆ ಅಲ್ಲಿ ನೀರಿನ ಒತ್ತಡ ಹೆಚ್ಚಿ ರಸ್ತೆಯಲ್ಲೆ ಚಿಲುಮೆ ರೀತಿಯಲ್ಲಿ ನೀರು ಬರುವಂತಹ ವ್ಯವಸ್ಥೆಯನ್ನು ನಾವು ನೋಡುತ್ತಿದ್ದೇವೆ ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ, ಇವತ್ತು ಲೋಕೊಪಯೋಗಿ ಇಲಾಖೆಯ ವರಿಷ್ಠ ಅಧಿಕಾರಿಗಳನ್ನು ನನ್ನ ತಾಲ್ಲೂಕಿಗೆ ಕಳುಹಿಸಬೇಕು ಸುಮಾರು 23 ಕಿಮೀ ಅಂತರರಾಜ್ಯ ರಸ್ತೆಯಾದಂತಹ ಪೆರುಂಬಾಡಿ–ಮಾಕೂಟ ರಸ್ತೆ ನೋಡುವುದಕ್ಕಾಗದೆ ಸಂಪೂರ್ಣವಾಗಿ ಹಾಳಾಗಿದೆ ಇವತ್ತು ಅಂತರ ರಾಜ್ಯ ರಸ್ತೆಗಳು ಸಂಪೂರ್ಣವಾಗಿ ನಿಲುಗಡೆಯನ್ನು ಮಾಡಿವೆ ಯಾವುದೇ ವಾಹನಗಳು ಸಂಚಾರ ಮಾಡದೇ ಇರುವಂತಹ ಪರಿಸ್ಥಿತಿ ಇದೆ ದಕ್ಷಿಣ ಕೊಡಗಿನಲ್ಲಿರುವಂತಹ ರಸ್ತೆಗಳ ಬಗ್ಗೆ ವಿಶೇಷ ಆದ್ಯತೆ ಕೊಡಬೇಕೆಂದು ನಾನು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಹಲವಾರು ಬಾರಿ ಮನವಿ ಮಾಡಿಕೊಂಡಿದ್ದೇನೆ ನನ್ನ ಮನವಿ ಬಗ್ಗೆ ಏಕೆ ನಿರ್ಲಕ್ಷ್ಯ

ತೋರಿಸುತ್ತಿದ್ದಾರೆಂದು ಗೊತ್ತಾಗುತ್ತಿಲ್ಲ ನಾನು ಕಂದಾಯ ಸಚಿವರಲ್ಲಿ ಪುನವಿ ಮಾಡಿಕೊಳ್ಳುವುದೇನೆಂದರೆ ತಾವು ದಯವಿಟ್ಟು ಆ ಭಾಗಕ್ಕ ವಿಶೇಷ ಅಧಿಕಾರವುಳ್ಳ ಅಧಿಕಾರಿಗಳನ್ನು ಕಳುಹಿಸಿಕೊಡಿ ಅವರ ಸಮೀಕ್ಷೆ ಸರಿಯಾದ ರೀತಿಯಲ್ಲಿ ಇರಲಿ ಅಲ್ಲಿ ಕಾಫಿ ಬೆಳೆ ಮುಂದಿನ ದಿನಗಳಲ್ಲಿ ಬರುವುದಿಲ್ಲ ಸಂಪೂರ್ಣವಾಗಿ ಕಾಫಿ ಗಿಡಗಳು ಕೊಳೆತು ನಾಶವಾಗುತ್ತಿವೆ ಕಾಫಿಯ ಇಳುವರಿಯನ್ನು ಕೊಡಬೇಕಾದಂತಹ ಗಿಡಗಳು ಸಂಪೂರ್ಣವಾಗಿ ನಾಶವಾಗುವಂತಹ ಮಟ್ಟದಲ್ಲಿ ಸತತ ಮಳೆಯಿಂದ ಹಾನಿಯಾಗಿದೆ ಆದುದರಿಂದ ಈ ಪ್ರದೇಶಕ್ಕೆ ವಿಶೇಷವಾಗಿ ಅಧಿಕಾರಿಗಳು ಭೇಟಿ ಕೊಡುವಂತಹ ರೀತಿಯಲ್ಲಿ ಮಾಡಿಸಬೇಕು ಗೋಣಿಕೊಪ್ಪ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನದಿ ದಂಡೆಯಲ್ಲಿ ಇರುವಂತಹ ಕೆಲವು ಗ್ರಾಮಸ್ಥರು ತುಂಬಾ ಬಡವರು ಅವರಿಗೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಜಮೀನು ಇದ್ದರೂ ಕೂಡ ಮನೆಗಳನ್ನು ಕೊಡುವುದಕ್ಕೆ ಅಧಿಕಾರ ಗ್ರಾಮ ಪಂಚಾಯತ್‌ಗೆ ಇದೆ ಅಲ್ಲಿ ಮನೆಗಳನ್ನು ಕಟ್ಟಿ ಕೊಡುವುದಕ್ಕೆ ಯಾವುದೇ ರೀತಿಯಲ್ಲಿ ಸಹಕಾರ ಕೊಡುತ್ತಿಲ್ಲ ಇವತ್ತು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ ಜಿಲ್ಲಾಧಿಕಾರಿಗಳಿಗೆ ವಿಶೇಷವಾದಂತಹ ಅಧಿಕಾರವನ್ನು ಕೊಟ್ಟು ಗೋಣಿಕೊಪ್ಪ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವಂತಹ ಯಾವುದೇ ಸರ್ಕಾರಿ ನಿವೇಶನ ಇದ್ದರೂ ಕೂಡ ಬಡವರಿಗೆ ಮನಗಳನ್ನು ಕಟ್ಟಿಕೊಡುವಂತಹ ರೀತಿಯಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಈ ಸರ್ಕಾರ ಮಾಡಿಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳತ್ತಿದ್ದೇನೆ ಕೊನೆಯದಾಗಿ ಇವತ್ತು ಹೆಚ್ಚಿನ ಪ್ರಮಾಣದಲ್ಲಿ ಕೊಡಗು ಜಿಲ್ಲೆಯಲ್ಲಿ ಮಳೆ ಬಂದಿದ್ದು ನನ್ನ ತಾಲ್ಲೂಕಿನಲ್ಲಿ ಈ ವರ್ಷ ವಾಡಿಕೆಗಿಂತ ಸುಮಾರು 600 mm ಗಿಂತ ಹೆಚ್ಚು ಮಳೆ ಬಿದ್ದಿದೆ ಆ ಪ್ರದೇಶ ಸಂಪೂರ್ಣವಾಗಿ ಹಾನಿಯಾಗಿದೆ ಅಲ್ಲಿ ರಸ್ತೆಯಾಗಿರಲಿ, ಬಡವರ ಮನೆಗಳಾಗಿರಲಿ, ಯಾವುದೇ ವಾಣಿಜ್ಯ ವಹಿವಾಟುಗಳನ್ನು ನಡೆಸುವಂತ ವ್ಯವಸ್ಥೆ ಅಲ್ಲಿ ಆಗಲಿ ಇವತ್ತು ತಾವೇನು ಕೊಡಗು ಜಿಲ್ಲೆಗೆ ಪರಿಹಾರ ರೂಪದಲ್ಲಿ ಮೊದಲನೇ ಹಂತದಲ್ಲಿ ಒಂದು ಕೋಟಿ ರೂಪಾಯಿ ಹಾಗೂ ಎರಡನೆ ಹಂತದಲ್ಲಿ ಐದು ಕೋಟಿ ರೂಪಾಯಿ ಕೊಟ್ಟಿದ್ದೀರಿ, ಆದರೆ ಇಷ್ಟು ಹಣ ಖಂಡಿತವಾಗಿ ಸಾಲುವುದಿಲ್ಲ ಅಲ್ಲಿ ರಸ್ತೆಗಳನ್ನು ಸರಿಪಡಿಸಬೇಕೆಂದರೆ ವಿಶೇಷ ಹಣವನ್ನು ಕೊಡಬೇಕಾಗುತ್ತದೆ ಅಲ್ಲಿಗೆ ಇನ್ನೂ ಹೆಚ್ಚಿನ ಪರಿಹಾರ ಮೊತ್ತವನ್ನು ಪ್ರಕಟ ಮಾಡಬೇಕೆಂದು ನಾನು ಸರ್ಕಾರಕ್ಕೆ ತಮ್ಮ ಮೂಲಕ ಕೇಳುತ್ತಿದ್ದೇನೆ

ಶ್ರೀ ಎ ಜಿ ಆರ್ ಸಿಂಧ್ಯಾ (ಕನಕಪುರ) – ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬಸವರಾಜುರವರು ಪ್ರಸ್ತಾಪ ಮಾಡಿರತಕ್ಕಂಥ ವಿಚಾರ ಅಕ್ಷರಶಃ ಸತ್ಯ ಕೊಡಗಿನಲ್ಲಿ ಕಳೆದ 2-3 ತಿಂಗಳಲ್ಲಿ ಭಾರೀ ದೊಡ್ಡ ಸಮಸ್ಯೆಯಾಗಿದೆ ತಮ್ಮ

ಇಲಾಖೆಗೆ ಸಂಬಂಧಪಟ್ಟ ಹಾಗೆ ಜಮೀನಿನ ವ್ಯವಹಾರದ ವಿಚಾರದಲ್ಲಿ ಹಿಂದೆ ಮಾಡಿರತಕ್ಕಂಥ ಸರ್ಕಾರಿ ಆಜ್ಞೆಯನ್ನು ರದ್ದು ಮಾಡಿದ್ದರಿಂದಾಗಿ ಇವತ್ತು ಮತ್ತೆ ಅದೊಂದು ಸಮಸ್ಯೆಯಾಗಿದೆ ಅದನ್ನು ಬಗೆಹರಿಸಬೇಕು ಇದು ಒಂದು ಭಾಗ ಮಳೆಯಿಂದಾಗಿ ಪ್ರತಿ ಸಲ ಕೊಡಗು ಎಂದರೆ ಗೊತ್ತಾಗುವುದು ಯಾವಾಗ ಎಂದರೆ ಯಾವಾಗ KRS ನಲ್ಲಿ ನೀರು ತುಂಬುವುದಿಲ್ಲ ಯಾವಾಗ ತಮಿಳುನಾಡಿನವರು ನೀರು ಬಿಡಿ ಎಂದು ಹೇಳುತ್ತಾರೆ ಆಗ ಮಾತ್ರ ಸರ್ಕಾರಗಳು ಕೊಡಗಿನ ಬಗ್ಗೆ ವಿಚಾರ ಮಾಡುತ್ತವೆ ನಾವು ಬಾಕಿ ಯಾವ ಸಂದರ್ಭಗಳಲ್ಲೂ ಕೊಡಗಿನ ಬಗ್ಗೆ ವಿಚಾರ ಮಾಡುತ್ತಿಲ್ಲ ಆದುದರಿಂದ ನಾನು ವಿಶೇಷವಾಗಿ ಮಾನ್ಯ ಜಗದೀಶ್ ಶೆಟ್ಟರ್‌ರವರು ಒಬ್ಬ ಸೂಕ್ಷ್ಮವಾಗಿರುವಂತಹ ಮತ್ತು ಸಮರ್ಥವಾಗಿರುವಂತಹ ಕೆಲಸ ಮಾಡುವುದಕ್ಕೆ ಶಕ್ತಿ ಇರುವಂತಹ ಕಂದಾಯ ಸಚಿವರಾಗಿದ್ದಾರೆ, ಒಂದು ಹಿನ್ನಲೆ ಇದೆ ಅವರಿಗೆ ನನ್ನ ಒಂದು ಸಲಹೆ ಏನೆಂದರೆ, ನಿಮಗೆ ಒಂದು Monitoring Committee ಇದೆ ಅದಕ್ಕೆ ಮಾನ್ಯ ಎಂ ಪಿ ಪ್ರಕಾಶ್‌ರವರು ಅಧ್ಯಕ್ಷರಾಗಿದ್ದಾರೆ ಅದರಲ್ಲಿ ತಮ್ಮದೇ ಪಾತ್ರವಿರುವಂಥಾದ್ದು The portfolio comes under you ನಿಮಗೆ ಒಳ್ಳೆಯ officers ಇದ್ದಾರೆ ನಾನು ತಮಗೆ ಏನು suggest ಮಾಡುತ್ತೇನೆಂದರೆ, ನಾವು ಇದರ ಬಗ್ಗೆ ಕಳೆದ ಬಾರಿ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕೆಂದು ಹೇಳಿದೆವು ಮಾನ್ಯ ಶರದ್ ಪವಾರ್‌ರವರು ಬಂದಿದ್ದರು ಆವತ್ತು ಮಾನ್ಯ ಮನಮೋಹನ ಸಿಂಗ್‌ರವರು ಬರಬೇಕಾಗಿತ್ತು ಅವರು ಆವತ್ತು ಬರುವುದಕ್ಕೆ ಆಗಲಿಲ್ಲ ಬೆಳಗಾಂ ಮತ್ತು ಬಿಜಾಪುರ ಜಿಲ್ಲೆಯಲ್ಲಿ ಕಲ್ಬುರ್ಗಿ, ರಾಯಚೂರು, ಸಿಂಧಗಿ ಮತ್ತು ಕೃಷ್ಣ ನದಿ ಎಲ್ಲೆಲ್ಲಿ ಹರಿಯುತ್ತದೆ, ಅಲ್ಲಿ ಮಹಾರಾಷ್ಟ್ರದಲ್ಲಿ ಮಳೆ ಜಾಸ್ತಿಯಾದಂಥ ಸಂದರ್ಭದಲ್ಲಿ ನೀರು ಬಿಡುವಂತಹ ಸಂದರ್ಭದಲ್ಲಿ ಇದು ಶಾಶ್ವತವಾಗಿ ಇರುವಂತಹ ಸಮಸ್ಯೆಯಾಗಿದೆ ಅದರ ಪಕ್ಕದಲ್ಲಿ ಇರುವಂಥಾ ಹಳ್ಳಿಗಳನ್ನು rehabilitation ಮಾಡುವಂಥಾದ್ದು ಒಂದು ಭಾಗವಾಗಿದೆ ಈ ವರ್ಷ ಕೊಡಗಿನಲ್ಲಿ ಬಿದ್ದಷ್ಟು ಮಳೆ ಕಳೆದ 8–10 ವರ್ಷಗಳಲ್ಲಿ ಆಗಿಲ್ಲ ಭೂಮಿಯಿಂದ ನೀರು ಉಕ್ಕಿ ಬರುತ್ತಿದೆ, ಎಂದು ಅಲ್ಲಿರುವ ಅನೇಕ ರೈತರು ನನ್ನನ್ನು ಭೇಟಿ ಮಾಡಿದ್ದವರು ನನಗೆ ತಿಳಿಸಿದರು ಸೇತುವೆಗಳು ಕೆಟ್ಟು ಹೋಗಿದೆ, ಸಂಪರ್ಕ ನಿಂತು ಹೋಗಿದೆ ಇಲ್ಲಿ 20–25 ದಿವಸಗಳಿಂದ ವಿದ್ಯುಚ್ಛಕ್ತಿ ಇಲ್ಲ ಮಹಾರಾಷ್ಟ್ರದಲ್ಲಿ 24 ಗಂಟೆಗಳ ಕಾಲ ಯಾವ ರೀತಿ ವಿದ್ಯುಚ್ಛಕ್ತಿ ಇಲ್ಲವೋ ಆ ರೀತಿ ಇಲ್ಲೂ 24 ಗಂಟೆ 30 ದಿವಸದಿಂದ ವಿದ್ಯುತ್ ಇಲ್ಲ ಈ ರೀತಿಯಾಗಿ ಅಲ್ಲಿ ಬಹಳ ತೊಂದರೆಯಾಗಿದೆ ಅಲ್ಲಿ ಎರಡು ವರ್ಗದ ಜನರು ಇದ್ದಾರೆ, ದುಡಿಯುವಂತಹ ವರ್ಗದವರು, ಇವರು ಬಹಳ ಕಷ್ಟದಲ್ಲಿರುವವರು ಇವರು ಗೋಣಿಚೀಲವನ್ನು ಹೊದ್ದುಕೊಂಡು ಜೀವನ ಮಾಡುವಂಥವರು, ಕೂಲಿ ಮಾಡುವಂಥವರು ಅವರಿಗೆ ಬಹಳ ತೊಂದರೆಯಾಗಿದೆ ಇಲ್ಲಿ ಸೀಮೆಎಣ್ಣೆ, ಅಕ್ಕಿ

ಅಷ್ಟೆ ಅಲ್ಲ, ಎಲ್ಲಾ ರೀತಿಯಲ್ಲೂ ಒಂದು permanent ಆಗಿ rehabilitation package ಅನ್ನು ನಾವು ಮಾಡಬೇಕಾಗುತ್ತದೆ ನಿಮಗೆ ಗೊತ್ತಿರುವ ಹಾಗೆ ಕೊಡಗನ್ನು ಒಂದು separate State ಆಗಿ ಮಾಡಿಕೊಳ್ಳಬೇಕೆಂದು ಹೇಳಿದರು ಈಗ constituency ಮೂರು ಇದ್ದದ್ದು ಎರಡಾಗಿದೆ, ಮತ್ತೆ ಜಮ್ಮಾ ಬಾಣೆ ಜಮೀನನ್ನು ಸರ್ಕಾರ ಮತ್ತೆ ಪುನರ್ ಪರಿಶೀಲನೆ ಮಾಡುವುದಕ್ಕೆ ತಯಾರು ಇದ್ದೀರೋ ಇಲ್ಲವೋ ನನಗೆ ಗೊತ್ತಿಲ್ಲ, ಇದು ಎರಡನೆಯ ಪ್ರಾಬ್ಲಂ ಆಗಿದೆ ಇನ್ನು ಮೂರು ವರ್ಷಕ್ಕೆ, ನಾಲ್ಕು ವರ್ಷಗಳಿಗೆ ಒಂದು ಸಾರಿ ಮಳೆ ಜಾಸ್ತಿಯಾದಾಗ, ಸತತವಾಗಿ ಈ problem ಅನ್ನು face ಮಾಡಬೇಕಾಗುತ್ತದೆ ಅದಕ್ಕೆ ಈಗ ಮಾನ್ಯ ಹೆಚ್ ಡಿ ಬಸವರಾಜುರವರು ಮತ್ತು ಅಲ್ಲಿನ ಶಾಸಕರುಗಳು ಏನು ಸಮಸ್ಯೆಗಳನ್ನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ಬಗೆಹರಿಸುವುದರ ಜೊತೆಗೆ, ಶಾಶ್ವತವಾಗಿ ಕಾವೇರಿ ಮತ್ತು ಕೃಷ್ಣ ನದಿಗಳಲ್ಲಿ ಪ್ರವಾಹ ಬಂದಂತಹ ಸಂದರ್ಭದಲ್ಲಿ ಏನಾದರೂ ಒಂದು ಶಾಶ್ವತವಾದ ಪರಿಹಾರವನ್ನು ಕಂಡು ಹಿಡಿಯುವುದಕ್ಕೆ, ಕೇಂದ್ರ ಸರ್ಕಾರಕ್ಕೂ ಯೋಜನೆಯನ್ನು ಕಳುಹಿಸಿ, ಮತ್ತೆ ರಾಜ್ಯ ಸರ್ಕಾರದಿಂದಲೂ ಸಹ ಹಣವನ್ನು ಕೊಡಬಹುದು ಇದರ ಬಗ್ಗೆ ಯೋಜನೆಯನ್ನು ತಯಾರು ಮಾಡುವುದಕ್ಕೆ ತಾವು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ, ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಒತ್ತಾಯ ಮಾಡುತ್ತೇನೆ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) – ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹೆಚ್ ಡಿ ಬಸವರಾಜುರವರು ಮತ್ತು ಹಿರಿಯ ಸದಸ್ಯರಾದ ಮಾನ್ಯ ಪಿ ಜಿ ಆರ್ ಸಿಂಧ್ಯರವರು, ಕೊಡಗು ಜಿಲ್ಲೆಯಲ್ಲಿ ಮುಂಗಾರು ಮಳೆ ಈ ಬಾರಿ ಅತಿ ಹೆಚ್ಚಿಗೆ ಬಂದಿದೆಯೆನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಕೊಡಗು ಜಿಲ್ಲೆಯಲ್ಲಿ ಅತಿ ಹೆಚ್ಚಿನ ಮಳೆಯಿಂದ ನಷ್ಟವಾಗಿರುವಂಥಾದ್ದರ ಬಗ್ಗೆ ನಾನು ಲಿಖಿತವಾಗಿ ಉತ್ತರವನ್ನು ಕೊಟ್ಟಿದ್ದೇನೆ, ನಂತರವೂ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ ತೋಟಗಾರಿಕೆ ಬೆಳೆ ರೂ 131 ಲಕ್ಷ, ಕೃಷಿ ಇಲಾಖೆ ಬೆಳೆ ರೂ 63 82 ಲಕ್ಷ, ವಾಸದ ಮನೆ ಹಾನಿ ರೂ 49 97 ಲಕ್ಷ, ಲೋಕೋಪಯೋಗಿ ಇಲಾಖೆ ಹಾನಿ ರೂ 854 50 ಲಕ್ಷ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ರೂ 854 50 ಲಕ್ಷ ಚೆಸ್ಕಾಂ ಇಲಾಖೆ ಹಾನಿ ರೂ 53 19 ಲಕ್ಷ, ಸಣ್ಣ ನೀರಾವರಿ ಇಲಾಖೆ ಹಾನಿ ರೂ 290 50 ಲಕ್ಷ, ಡಿ ಡಿ ಪಿ ಐ ರೂ 44 00 ಲಕ್ಷ ಒಟ್ಟು ಹಾನಿ ರೂ 3889 89 ಲಕ್ಷ, ಇಷ್ಟು ನಮ್ಮ ಅಧಿಕಾರಿಗಳು ಇವತ್ತು ಹಾನಿಯಾಗಿರುವ ಬಗ್ಗೆ ವರದಿಯನ್ನು ಕೊಟ್ಟಿದ್ದಾರೆ ಇಲ್ಲಿ ಸತತವಾಗಿ ಮಳೆ ಬೀಳುತ್ತಿದೆ ಇದು ಒಂದು ಹಂತದಲ್ಲಿ ಲೆಕ್ಕಾಚಾರ ಮಾಡಿರುವಂಥಾದ್ದು, ಇನ್ನೂ ವರದಿ ಬರುತ್ತಾ ಇದೆ

ಕೊಡಗು ಜಿಲ್ಲೆಯಲ್ಲಿ ಮುಂಗಾರು ಮಳೆಯಿಂದಾಗಿ ಕೆಳಗಿನಂತೆ ಅಂದಾಜು ನಷ್ಟವಾಗಿರುತ್ತದೆ

1) ತೋಟಗಾರಿಕೆ ಬೆಳೆ	378 4	ಹೆಕ್ಟೇರ್	ರೂ 131 31	ಲಕ್ಷ
2) ಕೃಷಿ ಇಲಾಖೆ ಬೆಳೆ	709 10	ಹೆಕ್ಟೇರ್	ರೂ 63 82	ಲಕ್ಷ
3) ವಾಸದ ಮನೆ ಹಾನಿ	563		ರೂ 49 97	ಲಕ್ಷ
4) ಲೋಕೋಪಯೋಗಿ ಇಲಾಖೆ ಹಾನಿ			ರೂ 854 50	ಲಕ್ಷ
5) ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್			ರೂ 854 54	ಲಕ್ಷ
6) ಚೆಸ್ಕಾಂ ಇಲಾಖೆ ಹಾನಿ			ರೂ 53 19	ಲಕ್ಷ
7) ಸಣ್ಣ ನೀರಾವರಿ ಇಲಾಖೆ ಹಾನಿ			ರೂ 290 50	ಲಕ್ಷ
8) ಡಿ ಡಿ ಪಿ ಐ			ರೂ 44 00	ಲಕ್ಷ
ಒಟ್ಟು ಹಾನಿ			ರೂ 3889 89	ಲಕ್ಷ

ತುರ್ತು ಪರಿಹಾರ ಕಾರ್ಯ ಕೈಗೊಳ್ಳಲು ಸರ್ಕಾರದಿಂದ ದಿನಾಂಕ 21 4 2007 ಮತ್ತು 21 5 2007 ರಂದು ಒಟ್ಟು ರೂ 150–00 ಲಕ್ಷ ಹಣ ಬಿಡುಗಡೆ ಮಾಡಲಾಗಿದೆ ತುರ್ತು ಪರಿಹಾರ ಕೈಗೊಳ್ಳಲು ಜಿಲ್ಲಾಡಳಿತವು ತಹಶೀಲ್ದಾರ್, ಮಡಿಕೇರಿ ಇವರಿಗೆ ರೂ 10 00 ಲಕ್ಷ ತಹಶೀಲ್ದಾರ್, ವಿರಾಜಪೇಟೆ ಇವರಿಗೆ ರೂ 20 00 ಲಕ್ಷ ತಹಶೀಲ್ದಾರ್, ಸೋಮವಾರಪೇಟೆ ಇವರಿಗೆ ರೂ 10 00 ಲಕ್ಷ ಬಿಡುಗಡೆ ಮಾಡಿದೆ

ಈಗಾಗಲೇ ಜಿಲ್ಲೆಯಲ್ಲಿ ಸಂಭವಿಸಿದ 3 ಮಾನವ ಪ್ರಾಣಹಾನಿ ಬಾಬ್ತು ತಲಾ ರೂ 50,000 00 ರಂತೆ ಹಾಗೂ 1 ಪ್ರಕರಣಕ್ಕೆ ಇತ್ತೀಚಿನ ಮಾರ್ಗಸೂಚಿಯಂತೆ ರೂ 1 00 ಲಕ್ಷ ಒಟ್ಟು ರೂ 2 50 ಲಕ್ಷ ಪರಿಹಾರ ನೀಡಲಾಗಿದೆ ಜಿಲ್ಲೆಯಲ್ಲಿ ಒಟ್ಟು 9 ಗಂಜಿ ಕೇಂದ್ರ ತೆರೆದು 518 ಜನರಿಗೆ ಆಶ್ರಯ ನೀಡಲಾಗಿದೆ ಪ್ರಸ್ತುತ ಸೋಮವಾರಪೇಟೆ ತಾಲ್ಲೂಕಿನಲ್ಲಿ ಕುದಿಕೆರೆ ಗ್ರಾಮದಲ್ಲಿ ಗಂಜಿ ಕೇಂದ್ರ ಮುಂದುವರಿಸಲಾಗಿದ್ದು 31 ಜನರಿಗೆ ಆಶ್ರಯ ಕಲ್ಪಿಸಲಾಗಿದೆ

ಪರಿಹಾರ ಕಾರ್ಯಗಳಿಗೆ ಈ ಹಿಂದೆ ಬಿಡುಗಡೆ ಮಾಡಿದ್ದ ರೂ 150 00 ಲಕ್ಷದಲ್ಲಿ ಕುಡಿಯುವ ನೀರಿಗೆ ರೂ 50 00 ಲಕ್ಷ ಹಾಗೂ ಇತರೆ ತುರ್ತು ಪರಿಹಾರ ಕಾರ್ಯಗಳಿಗೆ ವೆಚ್ಚ ಮಾಡಿರುವ ಮೊತ್ತ ಸೇರಿ ಒಟ್ಟು ರೂ 87 71 ಲಕ್ಷ ವೆಚ್ಚ ಮಾಡಲಾಗಿದೆ ಜಿಲ್ಲಾಧಿಕಾರಿಗಳ ಬಳಿ ಇನ್ನೂ ರೂ 66 28 ಲಕ್ಷ ಅನುದಾನ ಲಭ್ಯವಿದೆ

ಭಾಗಮಂಡಲ–ಅಯ್ಯಂಗೇರಿ ರಸ್ತೆ, ಭಾಗಮಂಡಲ–ಮಡಿಕೇರಿ ರಸ್ತೆ ಹಾಗೂ ಭಾಗಮಂಡಲ ಜಲಾವೃತಗೊಂಡಿದೆ ಈಗಾಗಲೇ ಮುನ್ನೆಚ್ಚರಿಕೆ ಕ್ರಮವಾಗಿ ದೋಣಿ ವ್ಯವಸ್ಥೆ ಮಾಡಲಾಗಿದೆ ನಿರಂತರವಾಗಿ ಮಳೆ ಸುರಿಯುತ್ತಿರುವ ಪ್ರದೇಶಗಳಲ್ಲಿ ಶಾಲೆ ಕಾಲೇಜುಗಳಿಗೆ 2 ದಿನ ರಜೆ ಘೋಷಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಅವಶ್ಯ ಇರುವ ಕಡೆ ಗಂಜಿ ಕೇಂದ್ರ ತೆರೆಯಲು ಸೂಚನೆ ನೀಡಲಾಗಿದೆ ಬೆಳೆ ಪರಿಹಾರ ನೀಡಲು ತುರ್ತು ಕ್ರಮ ತೆಗೆದುಕೊಳ್ಳಲಾಗುತ್ತಿದೆ

ತುರ್ತು ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ಕೊಡಗು ಜಿಲ್ಲೆಗೆ ದಿನಾಂಕ 17 7 2007 ರಂದು ರೂ 500 00 ಲಕ್ಷ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಲಾಗಿದೆ

ಮಾನ್ಯ ಹೆಚ್ ಡಿ ಬಸವರಾಜುರವರು ಇಲ್ಲಿ ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಅದು ಸೀಮೆಎಣ್ಣೆ ಸರಬರಾಜು ಮಾಡುವ ಬಗ್ಗೆ ಮತ್ತು ಅಕ್ಕಿಯನ್ನು ತಕ್ಷಣವೇ ಸರಬರಾಜು ಮಾಡಬೇಕೆನ್ನುವ ಬಗ್ಗೆ ಮತ್ತು ಕೆಲವೊಂದು ಕಡೆಗಳಲ್ಲಿ ಕಂಬಳಿಯನ್ನು ಕೊಡುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಇವುಗಳ ಬಗ್ಗೆಯೂ ನಾವು ತಕ್ಷಣವೇ ಅಲ್ಲಿನ ಜಿಲ್ಲಾಧಿಕಾರಿಯವರಿಗೆ ಸೂಚನೆಯನ್ನು ಕೊಟ್ಟು, ಎಲ್ಲೆಲ್ಲಿ ಇದರ ಅವಶ್ಯಕತೆ ಇದೆ, ಅದು ಸೀಮೆಎಣ್ಣೆಯನ್ನು ಕೊಡುವಂಥಾದ್ದು ಮತ್ತು ಅಕ್ಕಿಯನ್ನು ಕೊಡುವಂಥಾದ್ದು, ಕಂಬಳಿಯನ್ನು ಕೊಡುವಂಥಾದ್ದು ಇದೆ, ಅದನ್ನು ತಕ್ಷಣವೇ ಕೊಡುವುದಕ್ಕೆ ಸೂಚನೆಯನ್ನು ನಾವು ತಕ್ಷಣವೇ ಕೊಡುತ್ತಿದ್ದೇವೆ ಇನ್ನು ನಮ್ಮ ಆಹಾರ ಇಲಾಖೆಯಿಂದ 500KI ಸೀಮೆಎಣ್ಣೆಯನ್ನು ಈ ನೆರೆ ಹಾವಳಿ ಬಂದಂಥ ಸ್ಥಳಗಳಿಗೆ ತಕ್ಷಣವೇ ಕೊಡಬೇಕೆಂದು ಬಿಡುಗಡೆ ಮಾಡಿದ್ದಾರೆ ಇನ್ನು ಗೋಣಿಕೊಪ್ಪಕ್ಕೆ ಸಂಬಂಧಪಟ್ಟಂತೆ ಮಾನ್ಯ ಹೆಚ್ ಡಿ ಬಸವರಾಜುರವರು ವಿಶೇಷವಾಗಿ ಗಮನ ಸೆಳೆದಿದ್ದಾರೆ ಅಲ್ಲಿ ಏನು ತೊಂದರೆಯಾಗಿದೆ, ಅಲ್ಲಿ ಏನು ಪರಿಹಾರ ಕಾರ್ಯವನ್ನು ಕೈಗೊಳ್ಳಬೇಕು, ಏನೇನು ನಷ್ಟವಾಗಿದೆ ಅದಕ್ಕೆ ಪರಿಹಾರ ಧನವನ್ನು ಕೊಡುವುದಾಗಲಿ, ಅಥವಾ ತಕ್ಷಣವೇ ಅದಕ್ಕೆ ಬೇರೆ ವ್ಯವಸ್ಥೆಯನ್ನು ಮಾಡುವಂಥಾದ್ದು ಆಗಲಿ, ಅಥವಾ ಗಂಜಿ ಕೇಂದ್ರಗಳನ್ನು ತೆರೆಯುವಂಥಾದ್ದು ಆಗಲಿ, ಎಲ್ಲವನ್ನು ಆದಷ್ಟು ಬೇಗನೆ ಮಾಡುತ್ತೇವೆಂದು ಮತ್ತೆ ಆ ಬಗ್ಗೆ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳಬೇಕೆಂದು ಅಲ್ಲಿಯ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇವೆ ಇನ್ನು ಮಾನ್ಯ ಪಿ ಜಿ ಆರ್ ಸಿಂಧ್ಯಾರವರು ಬಹಳಷ್ಟು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ ಇವತ್ತು ಜಮ್ಮಾ ಬಾಣೆಯ ಬಗ್ಗೆ ವಿಷಯವನ್ನು ಪ್ರಸ್ತಾಪ ಮಾಡಿದರು ಈ ಬಗ್ಗೆ ಮತ್ತೊಂದು ಸಮಯದಲ್ಲಿ ವಿವರವಾಗಿ ಚರ್ಚೆಯನ್ನು

ಮಾಡಬಹುದು ಇನ್ನು ನೆರೆ ಹಾವಳಿ ಬಂದಂಥ ಸಮಯದಲ್ಲಿ, ಅದರಲ್ಲಿ repeated ಆಗಿ, ಇವತ್ತು ಕೊಡಗು ಜಿಲ್ಲೆಯಲ್ಲಿ ಅತಿ ಹೆಚ್ಚಿಗೆ ಮಳೆ ಬರುವಂಥಾದ್ದು, ಅದರಲ್ಲೂ ಈ ಸಾಲಿನಲ್ಲಿ ದೊಡ್ಡ ಪ್ರಮಾಣದಲ್ಲಿ ಮಳೆಯಾಗುತ್ತಿದೆ ಅದರಿಂದ ಇವತ್ತು ಏನೇನು ತೊಂದರೆಗಳಾಗಿವೆ, ಮತ್ತು ಆ ತೊಂದರೆಗಳನ್ನು ನಿವಾರಣೆ ಮಾಡುವ ಸಲುವಾಗಿ ಒಂದು ಖಾಯಂ ಆದ ಪರಿಹಾರವನ್ನು ಮಾಡಬೇಕೆನ್ನುವ ಬಗ್ಗೆ ಮಾನ್ಯ ಸಿಂಧ್ಯಾರವರು ಸಲಹೆಯನ್ನು ಕೊಟ್ಟಿದ್ದಾರೆ ಆ ಸಲಹಯನ್ನು ನಾನು ಸ್ವಾಗತ ಮಾಡುತ್ತೇನೆ ಈ ಬಗ್ಗೆ ಹಿರಿಯ ಅಧಿಕಾರಿಗಳನ್ನು ಕರೆಸಿ, ಮಾನ್ಯ ಮುಖ್ಯಮಂತ್ರಿಯವರು ಮತ್ತು ಉಪ ಮುಖ್ಯಮಂತ್ರಿಯವರೊಡನ consultation ಮಾಡಿ, ಅದಕ್ಕೆ ಖಾಯಂ ಆದ ರೀತಿಯಲ್ಲಿ ಪರಿಹಾರ ಮಾಡುವುದಕ್ಕೆ ಅಲ್ಲಿನ ಜನ ಪ್ರತಿನಿಧಿಗಳನ್ನು ಕರೆಸಿ, ಅದರ ಬಗ್ಗೆ ಸೂಕ್ತವಾದ ರೀತಿಯಲ್ಲಿ ಖಾಯಂ ಪರಿಹಾರ ಮಾಡುವುದಕ್ಕೆ ಏನು ಕ್ರಮವನ್ನು ಕೈಗೊಳ್ಳಬೇಕೋ ಅದರ ಬಗ್ಗೆಯೂ ಸಹ ಸರ್ಕಾರ ಆಲೋಚನೆ ಮಾಡುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಈ ನೆರೆ ಹಾವಳಿಯಲ್ಲಿ ಅದರಲ್ಲೂ ಮುಖ್ಯವಾಗಿ ಕೊಡಗು ಜಿಲ್ಲೆಗೆ ಸಂಬಂಧಪಟ್ಟಂತೆ ಎಲ್ಲಾ ರೀತಿಯ ಕ್ರಮವನ್ನು ಕೈಗೊಳ್ಳುತ್ತಿದ್ದೇವೆಂಬ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ

ಶ್ರೀ ಹೆಚ್ ಡಿ ಬಸವರಾಜು – ಮಾನ್ಯ ಉಪಾಧ್ಯಕ್ಷರೆ, ನಾನು ಒಂದೇ ಒಂದು ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ ಸುಮಾರು 700 ಗಿರಿಜನರ ಕುಟುಂಬಗಳು ಅರಣ್ಯ ಪ್ರದೇಶದ ಒಳಗಡೆ ವಾಸ ಮಾಡುತ್ತಿವೆ ಅವರು ಅರಣ್ಯ ಪ್ರದೇಶದಿಂದ ಹೊರಗಡೆ ಬರಲಾಗದಂಥ ಕೆಟ್ಟ ಪರಿಸ್ಥಿತಿ ಮತ್ತು ಸತತವಾಗಿ ಸುರಿಯುತ್ತಿರುವಂಥ ಮಳೆಯ ವಾತಾವರಣವಿದ ಇವತ್ತು ಸರ್ಕಾರಕ್ಕೆ ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ, ಕೋರಿಕೊಳ್ಳುತ್ತಿದ್ದೇನೆ, ಏನೆಂದರೆ ಆ ಭಾಗದಲ್ಲಿ ವಿಶೇಷವಾಗಿ, ಉಚಿತವಾಗಿ ಅಕ್ಕಿಯನ್ನು, ಸೀಮೆಎಣ್ಣೆಯನ್ನು, ಕಂಬಳಿಯನ್ನು, ಈ 700 ಕುಟುಂಬಗಳನ್ನು ಅಂಕಿ ಸಂಖ್ಯೆ ಸಮೇತ ಕೊಡುತ್ತಿದ್ದೇನೆ ಅದನ್ನು ಒದಗಿಸುವಂಥಾದ್ದನ್ನು ಸರ್ಕಾರ ಮಾಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳತ್ತೇನೆ

ಉಪಾಧ್ಯಕ್ಷರು – ಮಾನ್ಯ ಸಚಿವರೆ, ತಾವು ಅವರನ್ನು ತಮ್ಮ chamber ಗೆ ಕರೆಸಿಕೊಂಡು, discuss ಮಾಡಿ, ಸಮಸ್ಯೆಗಳನ್ನು ಬಗೆಹರಿಸಿಕೊಡಿ

ಶ್ರೀ ಜಗದೀಶ್ ಶೆಟ್ಟರ್ – ಮಾನ್ಯ ಉಪಾಧ್ಯಕ್ಷರೆ, ಈಗ ಮಾನ್ಯ ಹೆಚ್ ಡಿ ಬಸವರಾಜುರವರು ಏನು ಹೇಳಿದ್ದಾರೆ ಅದರ ಬಗ್ಗೆ ತಕ್ಷಣವೇ ಸೂಚನೆಯನ್ನು ಕೊಡುತ್ತೇವೆ

ಉಪಾಧ್ಯಕ್ಷರು – ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ ಇನ್ನು ಒಂದು ಪ್ರಕಟಣೆ ಇದೆ

ಪ್ರಕಟಣೆ

ಆರೋಗ್ಯ ಇಲಾಖಾವತಿಯಿಂದ ದಿ 23 7 2007 ರಂದು ಸೋಮವಾರ ಬೆಳಿಗ್ಗೆ 10 00 ಗಂಟೆಗೆ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆರೋಗ್ಯ ತಪಾಸಣೆಯನ್ನು ಮಾನ್ಯ ಶಾಸಕರುಗಳಿಗೆ ಹಾಗೂ ಪತ್ರಿಕಾ ಮಾಧ್ಯಮದವರಿಗೆ ಏರ್ಪಡಿಸಲಾಗಿದ್ದು, ದಯಮಾಡಿ ಭಾಗವಹಿಸಲು ಕೋರಲಾಗಿದೆ

ಉಪಾಧ್ಯಕ್ಷರು – ಈಗ ಸದನವನ್ನು ಸೋಮವಾರ ಬೆಳಿಗ್ಗೆ 11 00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

(ಸದನವು ಮಧ್ಯಾಹ್ನ 2 50 ಗಂಟೆಗೆ ಮುಕ್ತಾಯಗೊಂಡು ಪುನಃ ದಿನಾಂಕ 23ನೇ ಜುಲೈ ಮಾಹೆ 2007 ರ ಸೋಮವಾರದಂದು ಬೆಳಿಗ್ಗೆ 11 00 ಗಂಟೆಗೆ ಸೇರಲು ನಿಶ್ಚಯಿಸಿತು)